ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಯವರು):

ಯೋಜನೆಯ ಪರ್ಯಾಯ ಪ್ರಸ್ತಾವಗಳು ಪರಿಶೀಲನೆಯಲ್ಲಿದೆ. ಯೋಜನೆಯ ಅಂತಿಮ ವರದಿ ತಯಾರಾದ ನಂತರ ಇದಕ್ಕೆ ತಗಲುವ ವೆಚ್ಚ ಮತ್ತು ನೀರಾವರಿಯಾಗಲಿರುವ ಹೆಚ್ಚುವರಿ ಪ್ರದೇಶಗಳ ವಿವರಗಳು ಗೊತ್ತಾಗುವುದು.

ಯುವಕರಿಗೆ ಸೂಕ್ತ ಸೌಲಭ್ಯಗಳಿಲ್ಲದಿರುವ ಬಗ್ಗೆ.

1357 - ಶ್ರೀ ಎಂ.ನಾರಾಯಣಸ್ವಾಮಿ (ಬೇತ ಮಂಗಲ), ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೋಲಾರದಲ್ಲಿ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಜಿಲ್ಲಾ ಯುವಜನ ಕೇಂದ್ರವನ್ನು ಎಂದು ನಿರ್ಮಿಸಲಾಯಿತು.

ಆ) ಈ ಯುವಜನ ಕೇಂದ್ರವನ್ನು ಪ್ರಾರಂಭಿಸಿದಾಗಿನಿಂದ ಇಲ್ಲಿಯವರೆವಿಗೆ ನಿರ್ವಹಣೆಗಾಗಿ ಇಲಾಖೆಯಿಂದ ಕೊಟ್ಟಿರುವ ಹಣ ಎಷ್ಟು?

ಇ) ಈ ಯುವಜನ ಕೇಂದ್ರದಲ್ಲಿ ಕ್ರೀಡಾಪಟುಗಳಿಗೆ ಹಾಗೂ ದೈಹಿಕ ಕಸರತ್ತು ಮಾಡುವ ಯುವಕರ ಅನುಕೂಲಕ್ಕಾಗಿ ಯಾವುದೇ ಸೌಲಭ್ಯಗಳನ್ನು ಕಲ್ಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸೌಲಭ್ಯಗಳನ್ನು ಕಲ್ಪಿಸಿದ್ದರೆ ಈಗ ಯುವಜನ ಕೇಂದ್ರದಲ್ಲಿ ದೈಹಿಕ ಕಸರತ್ತು ಹಾಗೂ ಕ್ರೀಡಾ ಪಟುಗಳಿಗೆ ಅಭ್ಯಾಸ ಮಾಡಲು ಯಾವ ಯಾವ ಸೌಲಭ್ಯಗಳಿವೆ?

ಉ) ಈ ಕೇಂದ್ರದಲ್ಲಿರುವ ಷಟಲ್ ಕೋರ್ಟ್ ದುರಸ್ಥಿತಿಯಲ್ಲಿದ್ದರೂ ಅದನ್ನು ಸರಿಪಡಿಸಲು ಇಲಾಖೆಯು ಇದುವರೆವಿಗೂ ಕ್ರಮಕೈಗೊಳ್ಳದಿರಲು ಕಾರಣಗಳೇನು?

ಊ) ಯುವಜನ ಕೇಂದ್ರಗಳಲ್ಲಿ ಯುವಕರಿಗೆ ಹಾಗೂ ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ವಿಫಲವಾಗಿರುವ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳುವರೆ?

ಶ್ರೀ ಎಸ್. ರಮೇಶ್ (ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಕ್ರೀಡಾ ಮತ್ತು ಕ್ರೀಡಾ ಇಲಾಖೆ ಸಚಿವರು)

ಅ) ದಿನಾಂಕ: 1-4-1980 ರಂದು

ಆ) 92,050 ರೂಪಾಯಿಗಳು.

ಇ) ಜಿಲ್ಲಾ ಯುವಜನಸೇವಾ ಕೇಂದ್ರದಲ್ಲಿ ಟೇಬಲ್ ಟೆನ್ನಿಸ್,ಬ್ಯಾಡ್ಮಿಂಟನ್ ಹಾಗೂ ಭಾರ ಎತ್ತುವ ಸೌಲಭ್ಯಗಳನ್ನು ಒದಗಿಸಲಾಗಿದೆ. ಹೊಸ ಉಪಕರಣಗಳನ್ನು ಕೊಳ್ಳಲು ಜಿಲ್ಲಾಪರಿಷತ್ತಿಂದ ಹಣ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಉ) 1991-92ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತಿನ ಯೋಜನೆಯ ಅಡಿಯಲ್ಲಿ ಈ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆ.

ಊ) ಅಗತ್ಯವಾಗಿರುವ ಸೌಲಭ್ಯಗಳನ್ನು ನೀಡಲಾಗಿದ್ದು,ಉಳಿದ ಸೌಲಭ್ಯಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು

ಕಳ್ಳತನಗಳು ಹಾಗೂ ರಸ್ತೆ ದರೋಡೆಗಳ ಬಗ್ಗೆ.

1358 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ದರೋಡೆಗಳು ಎಷ್ಟು ಮತ್ತು ಕಳ್ಳತನಗಳು ಹಾಗೂ ರಸ್ತೆ ದರೋಡೆಗಳು ಎಷ್ಟು;(ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು)

ಆ) ಈ ಪೈಕಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ಎಷ್ಟು ಪ್ರಕರಣಗಳು ಪತ್ತೆಯಾಗಿಲ್ಲ.

ಇ) ಪತ್ತೆಯಾಗಿಲ್ಲದಿರುವ ಪ್ರಕರಣಗಳ ಬಗ್ಗೆ ತಡವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು),

ಅ) ಡಕಾಯಿತಿಕಳ್ಳತನ ರಸ್ತೆ ದರೋಡೆ

	ಡಕಾಯಿತಿ	ಕಳ್ಳತನ	ರಸ್ತೆ ದರೋಡೆ
1989	287	24418 K	16
1990	303	27687 Z	31
1991 (ಫೆಬ್ರುವರಿ ಅಂತ್ಯದವರೆಗೆ)	34	4619	7

ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ 'ಅ'ದಲ್ಲಿ ಕೊಡಲಾಗಿದೆ.

ಆ)

	ಡಕಾಯಿತಿ	ಕಳ್ಳತನ	ರಸ್ತೆ ದರೋಡೆ
1989			
ಪತ್ತೆಯಾದವು	82	7521	7
ಪತ್ತೆಯಾಗದವು	74	12723	8
1990			
ಪತ್ತೆಯಾದವು	87	5698	16
ಪತ್ತೆಯಾಗದವು	40	8244	5
1990 (ಫೆಬ್ರುವರಿ ಅಂತ್ಯದವರೆಗೆ)			
ಪತ್ತೆಯಾದವು	1	418	–
ಪತ್ತೆಯಾಗದವು	—	14	–

ಇ) ಆಪಾದಿತ ವ್ಯಕ್ತಿಗಳ ಬಗ್ಗೆ ಸುಳಿವು ಹಾಗೂ ಯಾವುದೇ ಮಾಹಿತಿ ದೊರೆಯದೇ ಇರುವುದರಿಂದ.

ಅನುಬಂಧ – 'ಅ'

ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ದರೋಡೆ, ಕಳ್ಳತನ ಮತ್ತು ರಸ್ತೆ ದರೋಡೆಗಳ ಜಿಲ್ಲಾವಾರು ಅಂಕಿ-ಅಂಶಗಳ ವಿವರ – (1991ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ)

ಕ್ರ. ಸ.	ಜಿಲ್ಲೆ	ದರೋಡೆ			ಕಳ್ಳತನ			ರಸ್ತೆ ದರೋಡೆ		
		1989	1990	1991	1989	1990	1991	1989	1990	1991
1.	ಬೆಂಗಳೂರು ನಗರ	19	21	2	9111	8897	1623	–	–	–
2.	ಬೆಂಗಳೂರು	24	28	2	1261	1413	247	1	–	–
3.	ತುಮಕೂರು	2	17	3	1137	1287	236	–	2	1
4.	ಕೋಲಾರ	12	22	8	715	855	153	2	2	–
5.	ಕೆ.ಜಿ.ಎಫ್.	3	–	–	500	509	99	–	–	–
6.	ಮೈಸೂರು	13	8	–	929	1149	141	1	2	–
7.	ಮಂಡ್ಯ	9	8	–	568	653	104	–	–	–
8.	ಹಾಸನ	4	8	–	788	1177	92	–	–	–
9.	ಕೊಡಗು	–	35	–	322	317	47	–	1	–
10.	ಶಿವಮೊಗ್ಗ	11	7	–	851	853	146	–	–	–
11.	ಬಳ್ಳಾರಿ	7	14	2	509	719	97	–	8	2
12.	ಚಿತ್ರದುರ್ಗ	7	19	–	850	958	180	–	1	1
13.	ದಕ್ಷಿಣಕನ್ನಡ	3	2	–	511	741	157	–	–	–
14.	ಚಿಕ್ಕಮಗಳೂರು	11	–	–	430	574	189	–	–	1
15.	ಉತ್ತರ ಕನ್ನಡ	1	4	–	386	402	67	–	–	–
16.	ಬೆಳಗಾವಿ	13	8	2	910	1086	235	–	–	–
17.	ಬಿಜಾಪುರ	27	34	5	645	729	76	1	1	1
18.	ಧಾರವಾಡ	12	18	2	717	831	112	1	1	–
19.	ಗುಲ್ಬರ್ಗಾ	11	11	1	630	684	48	–	3	–
20.	ಬೀದರ್	9	5	–	417	473	48	5	1	–
21.	ರಾಯಚೂರು	22	20	4	487	559	83	5	5	1
22.	ಕೋಲ್ಕಾ	2	7	–	422	363	47	–	–	–
23.	ಮೈಸೂರು ನಗರ	3	6	–	818	1140	277	–	4	–
24.	ಹುಬ್ಬಳ್ಳಿ-ಧಾರವಾಡ ನಗರ	3	1	1	567	504	115	–	–	–
ಒಟ್ಟು		228	303	34	24481	26873	4619	16	31	7

ಫಜನಿ ಒಡ್ಡು ಯೋಜನೆ ಕೆಲಸದ ಬಗ್ಗೆ.

1360 – ಶ್ರೀ ಎನ್ ಪ್ರಭಾಕರ ರಾಣೆ (ಕಾರವಾರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ತಾಲ್ಲೂಕಿನ ಕಿನ್ನರ-ಫಜನಿ ಒಡ್ಡು (ಖಾರಿಲ್ಯಾಂಡ್) ಪ್ರೊಟೀಕ್ಷನ್ ಸ್ಕೀಮ್ ಕಾಮಗಾರಿಯು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಪುನಃ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮ ಎನು?

ಶ್ರೀ ಕೆ.ಎಸ್. ಮಲ್ಲಿಕಾರ್ಜನ ಪ್ರಸನ್ನ, (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.